ಎಂಬತ್ತು ವರ್ಷದ ಒಬ್ಬ ವೃದ್ಧ ಇಪ್ಪತ್ತೈದು ವರ್ಷದ ಯುವತಿಯನ್ನು ವಿವಾಹವಾದ. ಒಮ್ಮೆ ವೃದ್ಧನನ್ನು ಆಸ್ಪತ್ರೆಗೆ ಸೇರಿಸಲಾಯಿತು. ಅವನಿಗೆ ತೀವ್ರ ಎದೆನೋವು ಆರಂಭವಾಗಿತ್ತು. ಹದಿಹರೆಯದ ಹೆಂಡತಿ ತನ್ನ ವೃದ್ಧ ಪತಿಯನ್ನು ನೋಡಲು ಆಸ್ಪತ್ರೆಗೆ ಬಂದಳು. ವೃದ್ಧ ತುಂಬಾ ಪ್ರೀತಿಯಿಂದ ಹೀಗೆ ಹೇಳಿದ.

ವೃದ್ಧ: ನನ್ನ ವಿಲ್‌ನಲ್ಲಿ ನನ್ನೆಲ್ಲಾ ಆಸ್ತಿಯನ್ನು ನಿನ್ನ ಹೆಸರಿಗೇ ಬರೆದಿದ್ದೇನೆ.

ಪತ್ನಿ: ನೀವು ನನಗೆ ಎಷ್ಟೊಂದು ದಯೆ ತೋರುತ್ತಿದ್ದೀರಿ. ನಿಮಗಾಗಿ ನಾನೇನು ಮಾಡಲಿ.

ವೃದ್ಧ: ಸದ್ಯ, ನೀನು ಆಕ್ಸಿಜನ್ ನಳಿಕೆ ಮೇಲಿರುವ ನಿನ್ನ ಕೈಯನ್ನು ಸಡಿಲಿಸು. ನಾನು ಸ್ವಲ್ಪ ಉಸಿರಾಡ್ತೀನಿ!

***

ಭಾವಿ ಮಾವ: ನೀನು ನನ್ನ ಮಗಳನ್ನು ಮದುವೆಯಾದ ನಂತರ ಎಲ್ಲಿ ನೆಲೆಸುತ್ತೀಯ?

ಭಾವಿ ಅಳಿಯ: ನಿಮ್ಮ ಮಗಳಿಗೆ ಬಿಟ್ಟಿದ್ದು.

ಭಾವಿ ಮಾವ: ಮದುವೆಯನ್ನು ಯಾವ ರೀತಿಯಲ್ಲಿ ಮಾಡಿಕೊಳ್ಳೀಯ?

ಭಾವಿ ಅಳಿಯ: ನಿಮ್ಮ ಹೆಂಡತಿಗೆ ಬಿಟ್ಟಿದ್ದು.

ಭಾವಿ ಮಾವ: ನನ್ನ ಮಗಳನ್ನು ಹೇಗೆ ಸಂತೋಷವಾಗಿಡ್ತೀಯ?


ಭಾವಿ ಅಳಿಯ: ಇದು ನೀವು ಕೊಡುವ ವರದಕ್ಷಿಣೆಗೆ ಬಿಟ್ಟಿದ್ದು!

***

ಗುಂಡ: ಸಾರ್, ಹುಚ್ಚರಾಸ್ಪತ್ರೆಯಿಂದ ಯಾರಾದರು ಹುಚ್ಚರು ಓಡಿ ಹೋದರೆ?

ಹುಚ್ಚಾಸ್ಪತ್ರೆ ಸಿಬ್ಬಂದಿ: ಇಲ್ವಲ್ಲ, ಏಕೆ?

ಗುಂಡ: ಇದೀಗ ತಾನೇ ಯಾರೋ ನನ್ನ ಹೆಂಡತಿಯನ್ನು ಅಪಹರಿಸಿಕೊಂಡು ಹೋದರು, ಅದಕ್ಕೆ!




ಪ್ರತಿಷ್ಠಿತರ ಬಡಾವಣೆಯಲ್ಲಿ ಒಬ್ಬ ಶ್ರೀಮಂತ ಒಂದು ಸ್ವಿಮಿಂಗ್ ಪೂಲ್ ನಿರ್ಮಿಸುತ್ತಿದ್ದ. ಅದಕ್ಕೆ ಹಣದ ಅಡಚಣೆ ಎದುರಾಯಿತು. ಶ್ರೀಮಂತ ತನ್ನ ಜಿಪುಣ ಸ್ನೇಹಿತನಿಗೆ ಹೀಗೆ ಹೇಳಿದ; 'ನೋಡಪ್ಪ ಹರೀಶ, ಎಷ್ಟಾದರೂ ನೀನು ನನ್ನ ಆತ್ಮೀಯ ಗೆಳೆಯ. ಸ್ವಿಮಿಂಗ್ ಪೂಲ್‌ಗೆ ನಿನ್ನ ಕೈಯಲ್ಲಾದ ಡೊನೇಷನ್ ಕೊಡು'. ಅದಕ್ಕೆ ಜಿಪುಣ ಹರೀಶ, ಸ್ವಲ್ಪ ಹೊತ್ತು ಯೋಚಿಸಿ ತನ್ನ ಮನೆಯಿಂದ ಒಂದು ಬಕೆಟ್ ನೀರು ತಂದು ಆ ಸ್ವಿಮಿಂಗ್ ಪೂಲ್‌ಗೆ ಸುರಿದ!

***

ಒಂದು ಭರ್ಜರಿ ಪಾರ್ಟಿ ನಡೆಯುತ್ತಿತ್ತು. ಎಲ್ಲರೂ ತಮ್ಮತಮ್ಮ ಅನುಭವಗಳನ್ನು ವರ್ಣಿಸುತ್ತಿದ್ದರು. ಎಲ್ಲರ ಹೆಂಡತಿಯರ ಬಗ್ಗೆ ವಿಷಯಾಂತರವಾಯಿತು. ಎಲ್ಲರೂ ತಮ್ಮ ತಮ್ಮ ಅನುಭವಗಳನ್ನು ಹೇಳುತ್ತಾ ತಮ್ಮತಮ್ಮ ಹೆಂಡತಿಯರ ಮೇಲೆ ಆರೋಪ ಹೊರಿಸಿದರು. ಒಬ್ಬ ಮಾತ್ರ ಬಾಯಿ ಬಿಟ್ಟಿರಲಿಲ್ಲ. ಕಡೆಗೆ ಎಲ್ಲರೂ ಒತ್ತಾಯಿಸಿದಾಗ ಅವನು ಹೇಳಿದ, 'ನನ್ನ ಹೆಂಡ್ತಿಯಿಂದ ವರ್ಷವಿಡೀ ನನಗೆ ಸುಖ ಸಿಕ್ಕಿತು. ಆದರೆ ಒಂದು ದಿನ ಮಾತ್ರ ನನ್ನ ಸುಖವನ್ನೆಲ್ಲಾ ಅವಳು ಹಾಳು ಮಾಡಿದಳು'. ಅಲ್ಲಿದ್ದವರು ಕುತೂಹಲದಿಂದ ಏಕೆ ಏನಾಯ್ತು' ಎಂದು ಪ್ರಶ್ನಿಸಿದರು. ಅದಕ್ಕೆ ಅವನು, 'ವರ್ಷವೆಲ್ಲಾ ತವರು ಮನೆಯಲ್ಲಿದ್ದ ಅವಳು ನನ್ನ ಮನೆಗೆ ವಾಪಸ್ ಬಂದುಬಿಟ್ಟು'!

***

ಒಂದು ಸ್ಟೇಡಿಯಂನಲ್ಲಿ ಕುಸ್ತಿ ಪಂದ್ಯ ನಡೆಯುತ್ತಿತ್ತು. ಇಬ್ಬರು ಪೈಲ್ವಾನರು ರಿಂಗ್‌ನಲ್ಲಿ ಕಾದಾಡುತ್ತಿದ್ದರು. ಸಮೀಪದಲ್ಲಿ ಕೂತಿದ್ದ ಒಬ್ಬ ವ್ಯಕ್ತಿ ಪದೇ ಪದೇ ಗಟ್ಟಿಯಾಗಿ, 'ಮುರಿಮುರಿ, ಅವನ ಹಲ್ಲುಗಳನ್ನೆಲ್ಲಾ ಮುರಿದು ಹಾಕು' ಎಂದು ಕಿರುಚುತ್ತಿದ್ದ. ಅವನ ಅಕ್ಕಪಕ್ಕದಲ್ಲಿದ್ದವರಿಗೆ ಇವನ ಕೂಗಾಟ ಕೇಳಿ ಆಶ್ಚರ್ಯವಾಗುತ್ತಿತ್ತು. ಕಡೆಗೆ ಅವರಲ್ಲಿದ್ದ ಒಬ್ಬ, 'ನೀವೇಕೆ ಪದೇ ಪದೇ ಹಲ್ಲು ಮುರಿಯಲು ಸಲಹೆ ಕೊಡ್ತಿದ್ದೀರ' ಎಂದು ಪ್ರಶ್ನಿಸಿದ? 'ನಾನು ಹಲ್ಲಿನ ಡಾಕ್ಟರ್!" ಎಂದ ಆ ವ್ಯಕ್ತಿ ಮತ್ತೆ ಕಿರುಚಿದ; 'ಮುರಿಮುರಿ, ಅವನ ಹಲ್ಲುಗಳನ್ನೆಲ್ಲಾ ಮುರಿದು ಹಾಕು' ಅಂತ!

***

ಒಂದು ಕವಿಗೋಷ್ಠಿ ನಡೆಯುತ್ತಿತ್ತು. ಕವಿಯೊಬ್ಬರು ತಮ್ಮ ಕವನಗಳನ್ನು ಹಾವ ಭಾವದಿಂದ ಓದುತ್ತಿದ್ದರು. ಕೆಲವೇ ಕ್ಷಣಗಳಲ್ಲಿ ಶ್ರೋತೃಗಳಲ್ಲಿ ಗುಜುಗುಜು ಆರಂಭವಾಯಿತು.

ಕವಿಗಳು ಓದುವುದನ್ನು ನಿಲ್ಲಿಸಿ ಶ್ರೋತೃಗಳಿಗೆ 'ಕವನ ಎಲ್ಲರಿಗೂ ಕೇಳಿಸುತ್ತಿದೆಯಲ್ಲ' ಎಂದು ಕೇಳಿದರು. 'ಇಲ್ಲ' ಎಂದರು ಕೆಲವರು. ಮೈಕ್ ಸರಿಪಡಿಸಲಾಯಿತು. ಕವಿಗಳು ಇನ್ನಷ್ಟು ಉತ್ಸಾಹದಿಂದ ಕವನವನ್ನು ಓದಲಾರಂಭಿಸಿದರು. ಈಗ ಮೊದಲಿಗಿಂತ ದುಪ್ಪಟ್ಟು ಗುಜುಗುಜು ಕೇಳಿ ಬಂತು.

ಕವಿಗಳು ಮತ್ತೆ ಕವನ ಓದುವುದನ್ನು ನಿಲ್ಲಿಸಿ ಮತ್ತೆ, 'ಪ್ರಿಯರೇ, ಈಗ ನಿಮಗೇನು ತೊಂದ್ರೆಯಾಗ್ತಿದೆ' ಎಂದು ಪ್ರಶ್ನಿಸಿದರು. ಅಲ್ಲೇ ಪಕ್ಕದಲ್ಲಿ ಕುಳಿತಿದ್ದ ಒಬ್ಬಾತ, 'ಈಗ ನಿಮ್ಮ ಕವನ ಕೇಳಿಸುತ್ತಿರುವುದರಿಂದ ತೊಂದ್ರೆಯಾಗ್ತಿದೆ' ಎಂದು ಪಿಸುಗಟ್ಟಿದ.

***

ಹಣದ ವಿಷಯದಲ್ಲಿ ತಲೆ ಕೆಡಿಸಿಕೊಂಡು ಗುಂಡ ಮನೋಚಿಕಿತ್ಸಕರ ಬಳಿ ಸಲಹೆ ಪಡೆಯಲು ಬಂದ. ಅವನ ಕಥೆಯನ್ನೆಲ್ಲಾ ಕೇಳಿದ ಮನೋಚಿಕಿತ್ಸಕರು, 'ಯೋಚ್ನೆ ಮಾಡ್ಬೇಡ. ನಿನ್ನಂಥ ರೋಗಿಯೊಬ್ಬ ನನ್ನ ಬಳಿಗೆ ಕೆಲ ದಿನಗಳ ಹಿಂದೆ ಬಂದಿದ್ದ. ಅವನು ದರ್ಜಿಗೆ ತುಂಬಾ ತುಂಬಾ ಹಣವನ್ನು ಕೊಡಬೇಕಿತ್ತು. ನಾನು ಅವನಿಗೆ ನೀನೆಲ್ಲವನ್ನೂ ಮರೆತು ಬಿಡು ಎಂದು ಸಲಹೆ ಕೊಟ್ಟೆ. ಅವನು ಕೆಲವೇ ದಿನಗಳಲ್ಲಿ ಗುಣಮುಖನಾದ. ಈಗ ನಿನ್ನ ಚಿಂತೆಗೆ ಕಾರಣ ಹೇಳು' ಎಂದ. 'ಆ ದರ್ಜಿ ನಾನೇ' ಎಂದಾಗ ಮನೋಚಿಕಿತ್ಸಕ ಅಲ್ಲೇ ಕುಸಿದು ಬಿದ್ದ.

ಸಂಗ್ರಹ: ಡಿ.ಎನ್. ಶ್ರೀನಾಥ್, ಶಿವಮೊಗ್ಗ

